**ಸಿಸಿ ಸಂಖ್ಯೆಃ -85/2022** **ಪಿ.ಡಬ್ಲ್ಯೂ.:-1**

ದಿನಾಂಕಃ **23-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-

ಆರೋಪಿಯು ನನ್ನಿಂದ ಇಟ್ಟಿಗೆಯನ್ನು ನಿರ್ದಿಷ್ಟವಾಗಿ ಯಾವ ದಿನಾಂಕದಂದು ಖರೀದಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ಈಗ್ಗೆ 4 ½ ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ನಮ್ಮಿಂದ ಆ ದಿನ ರೂ.3,68,000/- ಮೌಲ್ಯದ ಇಟ್ಟಿಗೆಯನ್ನು ಖರೀದಿ ಮಾಡಿರುತ್ತಾರೆ. ಸದರಿ ದಿನದಂದು ರೂ.1,00,000/- ಹಣವನ್ನು ಪೋನ್ ಪೇ ಮುಖಾಂತರ ನನ್ನ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ. ಆರೋಪಿಯು ಸ್ವಲ್ಪ ದಿನಗಳ ನಂತರ 2 ಚಕ್ಕುಗಳನ್ನು ಕೊಟ್ಟಿರುತ್ತಾರೆ. ಆರೋಪಿಯು ನಮ್ಮ ಹತ್ತಿರ ಇಟ್ಟಿಗೆಯನ್ನು ಖರೀದಿ ಮಾಡಿದ 2-3 ವರ್ಷಗಳ ಪೂರ್ವದಿಂದಲೂ ನಮಗೆ ಗೊತ್ತು. ಆರೋಪಿಯು ನಮಗೆ ರೂ.1,00,000/- ಹಣವನ್ನು ಪಾವತಿ ಮಾಡಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ತನ್ನ ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪೀರ್ಯಾದುವಿನಲ್ಲಿ ನಮೂದಾಗಿರುವ ವಿಚಾರಗಳನ್ನು ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪೀರ್ಯಾದುವಿನಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿಯನ್ನು ಮಾಡಿದ್ದೆನು. ನಾನು 7 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಸ್ವಲ್ಪ ಮಟ್ಟಿಗೆ ಓದಲು ಬರೆಯಲು ಬರುತ್ತದೆ.

ನನ್ನ ಪೀರ್ಯಾದು ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಿಃ 25-07-2021 ರಂದು ಆರೋಪಿಯು ನನ್ನಿಂದ ಇಟ್ಟಿಗೆಯನ್ನು ಖರೀದಿ ಮಾಡಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. ಪೀರ್ಯಾದು ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆರೋಪಿಯು ನಮ್ಮಿಂದ ರೂ.2,60,000/- ಮೌಲ್ಯದ ಇಟ್ಟಿಗೆಯನ್ನು ಖರೀದಿ ಮಾಡಿ ಮತ್ತು ಅದರಲ್ಲಿ ರೂ.60,000/- ಹಣವನ್ನು ಪಾವತಿ ಮಾಡಿ ಉಳಿದ ರೂ.2,00,000/- ಹಣಕ್ಕೆ 2 ಚೆಕ್ಕುಗಳನ್ನು ಕೊಟ್ಟಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಆರೋಪಿಯು  ನಮ್ಮಿಂದ ರೂ.3,60,000/- ಮೌಲ್ಯದ ಇಟ್ಟಿಗೆಯನ್ನು ಖರೀದಿ ಮಾಡಿ ರೂ.1,00,000/- ಹಣವನ್ನು ಪಾವತಿ ಮಾಡಿ ಉಳಿದ ರೂ.2,60,000/- ಹಣಕ್ಕೆ 2 ಚೆಕ್ಕುಗಳನ್ನು ಕೊಟ್ಟಿದ್ದಾರೆ ಎಂಬುದು ಸರಿ ಇರುತ್ತದೆ. ಆದರೆ ಪೀರ್ಯಾದು ಮತ್ತು ಮುಖ್ಯ ವಿಚಾರಣೆ  ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆರೋಪಿಯು ನಮ್ಮಿಂದ ರೂ.2,60,000/- ಮೌಲ್ಯದ ಇಟ್ಟಿಗೆಯನ್ನು ಖರೀದಿ ಮಾಡಿ ಮತ್ತು ಅದರಲ್ಲಿ ರೂ.60,000/- ಹಣವನ್ನು ಪಾವತಿ ಮಾಡಿ ಉಳಿದ ರೂ.2,00,000/- ಹಣಕ್ಕೆ 2 ಚೆಕ್ಕುಗಳನ್ನು ಕೊಟ್ಟಿದ್ದಾರೆ ಎಂದು ನಮೂದಾಗಿರುವುದು ಸರಿ ಇರುವುದಿಲ್ಲ. ಪ್ರಸ್ತುತ ವ್ಯವಹಾರವನ್ನು ಹೊರತುಪಡಿಸಿ ನಮ್ಮ ಮತ್ತು ಆರೋಪಿಯ ನಡುವೆ ನಂತರ ಯಾವುದೇ ವ್ಯವಹಾರ ಆಗಿರುವುದಿಲ್ಲ. ಆರೋಪಿಯು ನಮ್ಮಿಂದ ರೂ.2,60,000/- ಮೌಲ್ಯದ ಇಟ್ಟಿಗೆಯನ್ನು ಖರೀದಿ ಮಾಡಿ ಆ ಸಮಯದಲ್ಲಿ ರೂ.60,000/- ಹಣವನ್ನು ನಗದಾಗಿ ಪಾವತಿ ಮಾಡಿ ಉಳಿದ ರೂ.2,00,000/- ಹಣಕ್ಕೆ 2 ಚೆಕ್ಕುಗಳನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮಿಂದ ಖರೀದಿ ಮಾಡಿದ ಇಟ್ಟಿಗೆಗಳು ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಕಟ್ಟಡಕ್ಕೆ ಬಳಸಲು ಯೋಗ್ಯ ಇಲ್ಲ ಎಂದು ಇಂಜಿನಿಯರ್ ರವರು ಇಟ್ಟಿಗೆಗಳನ್ನು ಕಟ್ಟಡದ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲು ತಿರಸ್ಕರಿಸಿದರು ಎಂದು ಆರೋಪಿಯು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ರೂ.1,35,000/- ಮೌಲ್ಯದ ಇಟ್ಟಿಗೆಗಳು ಕಟ್ಟಡ ಮಾಡಲು ಯೋಗ್ಯದಿಂದ ಕೂಡಿದೆ ಉಳಿದ ಇಟ್ಟಿಗೆಗಳು ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಲು ಯೋಗ್ಯ ಇಲ್ಲ ಎಂದು ತಿರಸ್ಕರಗೊಂಡಿರುತ್ತದೆ ಎಂದರೆ ಸರಿಯಲ್ಲ. ನನ್ನ

ಕೆನರಾ ಬ್ಯಾಂಕ್ ಉಳಿತಾಯ ಖಾತೆಯ ನಂಬರ್ ನೆನಪಿಲ್ಲ. ನನ್ನ ಕೆನರಾ ಬ್ಯಾಂಕ್ ಖಾತೆ ಸಂಖ್ಯೆ 4536 ರಂತೆ ಕೊನೆಗೊಳ್ಳುತ್ತದೆ ಎಂದರೆ ನನಗೆ ನೆನಪಿಲ್ಲ. ನನ್ನ ಕೆನರಾ ಬ್ಯಾಂಕ್ ಖಾತೆಯ ಪಾಸ್ ಪುಸ್ತಕವನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ದಿಃ 24-08-2021 ರಂದು ಆರೋಪಿಯು ಫೋನ್ ಪೇ ಮುಖಾಂತರ ನನ್ನ ಖಾತೆಗೆ ರೂ.50,000/- ಹಣವನ್ನು ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 29-08-2021 ರಂದು ಆರೋಪಿಯು ಉಳಿದ ರೂ.25,000/- ಹಣವನ್ನು ಫೋನ್ ಪೇ ಮುಖಾಂತರ ನನ್ನ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಆರೋಪಿ ಚಕ್ಕುಗಳನ್ನು ವಾಪಾಸ್ಸು ಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ಆರೋಪಿಯ ಚಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಕೆನರಾ ಬ್ಯಾಂಕ್ ಖಾತೆಯ ಪಾಸ್ ಪುಸ್ತಕವನ್ನು ಹಾಜರುಪಡಿಸುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.